

# ಸಿಕ್ಕಿಂನ ಮೋಹಕ ಜಲಧಾರೆ

**ಜಲಪಾತ ಎಂದರೆ ರೌದ್ರ–ರಮಣೀಯತೆಯ ಅಪೂರ್ವ ಸಮೀಕರಣದಂತೆ ಮನಸ್ಸು ಸೂರೆಗೊಳ್ಳುತ್ತವೆ. ಆದರೆ, ಸಿಕ್ಕಿಂನ ಬನ್‌ಜಾಕ್ತಿ ಸಹೃದಯರ ಗಮನಸೆಳೆಯುವುದು ತನ್ನ ಸರಳತೆಯಿಂದ ಹಾಗೂ ಜಲಧಾರೆಯ ಸುತ್ತಮುತ್ತಲಿನ ಸ್ವಚ್ಛ ಪರಿಸರದಿಂದ. ಇಲ್ಲಿ ರೌದ್ರಕ್ಕಿಂತಲೂ ರಮಣೀಯತೆಯ ಪಾತ್ರವೇ ಹೆಚ್ಚು. ಆಕಲಂಕಿತ ಪ್ರಕೃತಿಯ ಸುಂದರ ಕಾವ್ಯದಂತೆ ಬನ್‌ಜಾಕ್ರಿ ಸೌಂದರ್ಯೋಪಾಸಕರ ಚಿತ್ತಾಪಹರಣ ಮಾಡುತ್ತದೆ.**

■ **ಶ್ರೀನಿವಾಸಮೂರ್ತಿ ಎನ್‌.ಎಸ್‌.**

ಸಿಕ್ಕಿಂನ ಬನ್‌ಜಾಕ್ರಿ (**Banjhakri Water Falls** – ಕನ್ನಡದಲ್ಲಿ ಭಜಂಕರಿ ಎನ್ನಬಹುದೇನೊ?) ಜಲಪಾತದ ಸನ್ನಿಧಿಯಲ್ಲಿ ನಿಂತರೆ ಮೈಮನಗಳಲ್ಲಿ ಮಿಂಚೊಂದು ಹರಿದಂತಾಗಿ ಮಾತು ಮನದಲ್ಲಿ ನೆಲೆ ನಿಲ್ಲುವುದು. ಭೋರ್ಗರೆವ ಈ ಜಲಪಾತ ತನ್ನ ಮುಗ್ಧ ಸ್ನಿಗ್ಧ ಸೌಂದರ್ಯದಿಂದ ಸಹೃದಯರನ್ನು ಮೋಹಕಗೊಳಿಸುವುದು.

ಬಾನಿನಿಂದ ಧರಣಿಯ ಸ್ಪರ್ಶಕ್ಕೆ ಕಾತರದಿಂದ ಇಳಿದುಬರುವ ಸ್ಫಟಿಕದಷ್ಟು ಶುಭ್ರವಾದ ಜಲಧಾರೆ ಹಾಗೂ ಅಷ್ಟೇ ಶುಭ್ರವಾದ ಪರಿಸರ ನೋಡುಗರಲ್ಲಿ ಅವರ್ಣನೀಯ ಅನುಭೂತಿಯನ್ನು ಮೂಡಿಸುತ್ತದೆ. ಭೂಮಿಯ ಹಸಿರಿನ ಸಿಂಗಾರಕ್ಕೆ ತೋರಣ ಕಟ್ಟಿದಂತೆ ಪ್ರಕೃತಿಯ ಸೊಬಗು ಮನಸೆಳೆಯುವುದು. ಸಾಮಾನ್ಯವಾಗಿ ನಮ್ಮಲ್ಲಿನ ಜಲಪಾತದ ಬುಡಗಳಲ್ಲಿ ಮನುಷ್ಯರು ಚೆಲ್ಲಿದ ತ್ಯಾಜ್ಯಗಳು ಕಾಣಿಸುವವು. ಆದರೆ, ಈ ಜಲಪಾತದ ಸನಿಹಕ್ಕೆ ಸಾಗಿದರೂ ಮಲಿನಗೊಳ್ಳದ ವಾತಾವರಣ ಎದುರಾಗಿ, ಮನಸ್ಸು ಉಲ್ಲಾಸಗೊಳ್ಳುವುದು.

ಬನ್‌ಜಾಕ್ರಿ ಜಲಪಾತವನ್ನು ನೋಡುತ್ತಿದ್ದರೆ, ಇದು ನಮ್ಮ ಕನಸಿನ ಜಲಪಾತದಂತೆ ತೋರಬಹುದು. ಆದರೆ, ಇಲ್ಲಿನ ವಿಶೇಷವೇ ಕಲುಷಿತಗೊಳ್ಳದ ಪರಿಸರ. ಆ ಕಾರಣದಿಂದಲೇ ಇಲ್ಲಿನ ಸೌಂದರ್ಯಕ್ಕೆ ವಿಶೇಷ ಆಕರ್ಷಣೆ.

ನಿತ್ಯ ಯೌವನದ ಈ ಜಲಪಾತ ಇರುವುದು ಸಿಕ್ಕಿಂ ರಾಜ್ಯದ ಗ್ಯಾಂಗ್‌ಟಾಕ್ ಸಮೀಪ. ನಮ್ಮ ಗ್ಯಾಂಗ್‌ಟಾಕ್ ಪ್ರವಾಸದಲ್ಲಿ ‘ಮೊದಲ ಭೇಟಿ ಜಲಪಾತಕ್ಕೆ’ ಎಂದಾಗ